**೧೩.೦೬.೨೦೧೪ರಂದು ನಡೆದ ಪ್ರಶಾಸನ ಸಮಿತಿ ೨೨ನೇ ಸಭೆಯ ನಡಾವಳಿ**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೨೨ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜೂನ್ ೧೩, ೨೦೧೪ರ ಶುಕ್ರವಾರ ಬೆಳಿಗ್ಗೆ ೧೧:೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಶ್ರೀನಿವಾಸ ವರಖೇಡಿ,** ಮಾನ್ಯ ಕುಲಪತಿಗಳು (ಪ್ರಭಾರಿ) | ಅಧ್ಯಕ್ಷರು |
| ೨. | **ಪ್ರೊ. ಕೆ.ಈ. ರಾಧಾಕೃಷ್ಣ,** ಬೆಂಗಳೂರು | ಸದಸ್ಯರು |
| ೩. | **ಡಾ. ವನಿತಾ ರಾಮಸ್ವಾಮಿ,** ಬೆಂಗಳೂರು | ಸದಸ್ಯರು |
| ೪. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೫. | **ಪ್ರೊ. ವಿ. ಗಿರೀಶ್‌ಚಂದ್ರ,** ಡೀನ್, ಭಾಷಾನಿಕಾಯ, ಕಸಂವಿ | ಸದಸ್ಯರು |
| ೬. | **ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ,** ಡೀನ್, ವೇದಾಂತ ನಿಕಾಯ, ಕಸಂವಿ | ಸದಸ್ಯರು |
| ೭. | **ಪ್ರೊ. ಎಂ.ಕೆ. ಶ್ರೀಧರ್,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೭. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೮. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೯. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೧೦. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೧೧. | **ಆಯುಕ್ತರು,** ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯ ಆರಂಭದಲ್ಲಿ ವಿಶ್ವವಿದ್ಯಾಲಯದ **ಪ್ರಥಮ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಇವರ ಅನನ್ಯವಾದ ಸೇವೆಯನ್ನು ಆದರಪೂರ್ವಕವಾಗಿ ದಾಖಲಿಸಲು ಸಭೆಯು ಒಮ್ಮತದಿಂದ ಸೂಚಿಸಿತು.** ಅಧ್ಯಕ್ಷರಾದ ಮಾನ್ಯ ಕುಲಪತಿಗಳು ಈ ಸಂಬಂಧ ಅವರಿಗೆ ಸಭೆಯ ಪರವಾಗಿ ಒಂದು ಪತ್ರ ಬರೆಯುವುದಾಗಿ ಸಭೆಗೆ ತಿಳಿಸಿದರು. ಸಭೆಯು ನೂತನ ಕುಲಸಚಿವರಾದ ಪ್ರೊ. ಎಂ.ಕೆ. ಶ್ರೀಧರ್ ಅವರನ್ನು ಸ್ವಾಗತಿಸುತ್ತಾ, ಅವರಿಂದ ವಿಶ್ವವಿದ್ಯಾಲಯಕ್ಕೆ ಅಪಾರ ನಿರೀಕ್ಷೆಗಳಿವೆ ಎಂಬುದನ್ನು ತಿಳಿಸಿತು. ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ (ವಿಧಾನ ಪರಿಷತ್ತಿನ ನಾಮನಿರ್ದೇಶಿತ) ಸದಸ್ಯರಾದ ಡಾ. ಎಸ್.ಆರ್. ಲೀಲಾ ಇವರ ಸದಸ್ಯತ್ವದ ಅವಧಿಯು ದಿನಾಂಕ ೨೦.೦೬.೨೦೧೪ರಂದು ಪೂರ್ಣಗೊಳ್ಳುತ್ತದೆ. ಇವರು ವಿಶ್ವವಿದ್ಯಾಲಯದ ಅಭಿವೃದ್ಧಿಯ ನಿಟ್ಟಿನಲ್ಲಿ ಅನೇಕ ಸಲಹೆ ಸೂಚನೆಗಳನ್ನು ನೀಡಿ ವಿವಿಧ ರೀತಿಯಲ್ಲಿ ಸಹಕರಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಅವರಿಗೆ ಧನ್ಯವಾದ ಪೂರ್ವಕವಾಗಿ ಹೂಗುಚ್ಛವನ್ನು ನೀಡುವ ಮೂಲಕ ಆತ್ಮೀಯವಾಗಿ ಸನ್ಮಾನಿಸಲಾಯಿತು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಾಸನ ಸಮಿತಿ ಇಪ್ಪತ್ತೊಂದನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 07.05.2014ರಂದು ನಡೆದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ಇಪ್ಪತ್ತೊಂದನೇ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.
**ವಿಷಯ ಸಂಖ್ಯೆ 3,4,5,6,7**ಗಳಿಗೆ ಸಂಬಂಧಿಸಿದಂತೆ ತೃತೀಯ ದೀಕ್ಷಾಂತ ಘಟಿಕೋತ್ಸವದಲ್ಲಿ ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 8**ಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 9**ಕ್ಕೆ ಸಂಬಂಧಿಸಿದಂತೆ ಸ್ಥಳೀಯ ಮನೆ ಬಾಡಿಗೆ ನೀಡಲು ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 10**ಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗಿದೆ.

ನಿರ್ಣಯ: **ದಿನಾಂಕ 07.05.2014ರಂದು ನಡೆದ ಪ್ರಶಾಸ ಸಮಿತಿಯ 21ನೇ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತ ನಿರ್ಣಯಗಳಂತೆ ಕ್ರಮಕೈಗೊಳ್ಳುವ ಅನುಪಾಲನಾ ವರದಿಗೆ ಸಂಬಂಧಿಸಿದಂತೆ ವಿವರಗಳನ್ನು ಮುಂದಿನ ಸಭೆಯಲ್ಲಿ ನೀಡುವಂತೆ ಸೂಚಿಸಲಾಯಿತು.**

**ವಿಷಯ 2: ಪ್ರಶಿಕ್ಷಣ ಪರಿಷತ್ತಿನ 12ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ: ದಿನಾಂಕ: 05.06.2014ರಂದು ಪ್ರಶಿಕ್ಷಣ ಪರಿಷತ್ತಿನ 12ನೇ ಸಭೆಯು ನಡೆಯಿತು. ಸಭೆಯ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಪ್ರಶಿಕ್ಷಣ ಪರಿಷತ್ತಿನ 12ನೇ ಸಭೆಯ ನಡಾವಳಿಯನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 3: ಹಣಕಾಸು ಸಮಿತಿಯ 14ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ: ದಿನಾಂಕ: 21.05.2014ರಂದು ಹಣಕಾಸು ಸಮಿತಿಯ 14ನೇ ಸಭೆಯು ನಡೆಯಿತು. ಸಭೆಯ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಹಣಕಾಸು ಸಮಿತಿಯ 14ನೇ ಸಭೆಯ ನಡಾವಳಿಯನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 4: ಶ್ರೀಮತಿ ಸುಧಾ ಮೂರ್ತಿ –ಇವರು ವಿಶ್ವವಿದ್ಯಾಲಯಕ್ಕೆ ನೀಡಿರುವ 20 ಲಕ್ಷ ರೂ.ಗಳನ್ನು ಸಂಬಂಧಿಸಿದ ದತ್ತಿನಿಧಿಯನ್ನು ಠೇವಣಿಯಾಗಿ ಇರಿಸಿರುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ತೃತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭವು 2014ರ ಮೇ 07ರಂದು ಬೆಳಿಗ್ಗೆ 11.00 ಗಂಟೆಗೆ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಇನ್‌ಫೋಸಿಸ್ ಫೌಂಡೇಶನ್‌ನ ಅಧ್ಯಕ್ಷರಾದ ಡಾ. ಸುಧಾ ಮೂರ್ತಿ ಅವರು ವಿಶ್ವವಿದ್ಯಾಲಯಕ್ಕೆ **20 ಲಕ್ಷ ರೂಪಾಯಿ**ಗಳನ್ನು ದೇಣಿಗೆಯಾಗಿ ನೀಡಿದರು. ಈ ದೇಣಿಗೆಯನ್ನು ಬಿ.ಎ. ವಿದ್ವನ್ಮಧ್ಯಮಾ ಪದವಿಯ ಮೂರು ವರ್ಷಗಳಲ್ಲಿ ಅತಿಹೆಚ್ಚು ಅಂಕ ಪಡೆದ ಇಬ್ಬರು ವಿದ್ಯಾರ್ಥಿಗಳಿಗೆ (ಒಬ್ಬ ವಿದ್ಯಾರ್ಥಿ ಮತ್ತು ಒಬ್ಬ ವಿದ್ಯಾರ್ಥಿನಿ) ತಲಾ ಐದು ಲಕ್ಷ ರೂಪಾಯಿಗಳಿಂದ ಬಂದ ವಾರ್ಷಿಕ ಬಡ್ಡಿ ಮೊತ್ತವನ್ನು ನೀಡಬೇಕೆಂದು ಹಾಗೂ ಎಂ.ಎ. ವಿದ್ವದುತ್ತಮಾ ಪದವಿಯ ಎರಡು ವರ್ಷಗಳಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ (ಒಬ್ಬ ವಿದ್ಯಾರ್ಥಿ ಮತ್ತು ಒಬ್ಬ ವಿದ್ಯಾರ್ಥಿನಿ) ತಲಾ ಐದು ಲಕ್ಷ ರೂಪಾಯಿಗಳಿಂದ ಬಂದ ವಾರ್ಷಿಕ ಬಡ್ಡಿ ಮೊತ್ತವನ್ನು ಆಯಾ ವರ್ಷಗಳಲ್ಲಿ ನಡೆಯುವ ದೀಕ್ಷಾಂತ ಘಟಿಕೋತ್ಸವಗಳಲ್ಲಿ ನೀಡಬೇಕೆಂದು ಆಶಿಸಿದ್ದಾರೆ. ದತ್ತಿನಿಧಿಯ ಈ ಮೊತ್ತವನ್ನು ಠೇವಣಿಯಾಗಿ ಇರಿಸಲಾಗಿದ್ದು, ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಶ್ರೀಮತಿ ಸುಧಾಮೂರ್ತಿ, ಇವರು ವಿದ್ಯಾರ್ಥಿಗಳ ಪ್ರೋತ್ಸಾಹಕ್ಕಾಗಿ ನೀಡಿರುವ ದತ್ತಿನಿಧಿಯನ್ನು ಠೇವಣಿಯಾಗಿ ಇಟ್ಟಿರುವ ಕ್ರಮಕ್ಕೆ ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 5: ಶ್ರೀ ಮೇಧಾದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ – ಈ ಕಾಲೇಜಿನ ಸಾದಿಲ್ವಾರು ವೆಚ್ಚವನ್ನು ಪಾವತಿಸಿರುವ ಬಗೆಗೆ.**

ಟಿಪ್ಪಣಿ: ಶ್ರೀ ಮೇಧಾದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಮಹಾವಿದ್ಯಾಲಯ, ಈ ಕಾಲೇಜಿನ ಪ್ರಾಚಾರ್ಯರು 2013–14ನೇ ಸಾಲಿನ ಕಾಲೇಜಿನ ಕಛೇರಿ ಸಾದಿಲ್ವಾರು ವೆಚ್ಚವನ್ನು ಪಾವತಿಸಿದ್ದರು. ಈ ಮೊತ್ತವಾದ ರೂ. 17,952/–ಗಳನ್ನು ವಿಶ್ವವಿದ್ಯಾಲಯದಿಂದ ಪಾವತಿಸಲಾಗಿದ್ದು, ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಶ್ರೀ ಮೇಧಾದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ – ಈ ಕಾಲೇಜಿನ ಪ್ರಾಚಾರ್ಯರು ಪಾವತಿಸಿರುವ ಕಾಲೇಜಿನ ಸಾದಿಲ್ವಾರು ವೆಚ್ಚ ರೂ. 17,192/–ಗಳ ಪಾವತಿಸಿರುವ ಬಗೆಗೆ ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 6: ಜ್ಯೋತಿಷ್ಯ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳನ್ನು ನಡೆಸುವ ಸಂಸ್ಥೆಗಳಿಗೆ ಮಾನ್ಯತೆ ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2014–15ನೇ ಸಾಲಿನಿಂದ ಜ್ಯೋತಿಷ್ಯ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳನ್ನು ಪ್ರಾರಂಭಿಸಿದ್ದು, ಈ ಕೋರ್ಸುಗಳನ್ನು ನಡೆಸುವ ಅಧ್ಯಯನ ಸಂಸ್ಥೆಗಳಿಗೆ ಮಾನ್ಯತೆ ನೀಡಬೇಕಾಗಿದ್ದು, ಈ ಸಂಬಂಧ ತ್ರಿಸದಸ್ಯ ಸಮಿತಿಯ ವರದಿಯನ್ನು ಪಡೆದು ಕ್ರಮವಹಿಸಲಾಗಿದೆ. ಘಟನೋತ್ತರ ಅನುಮೋದನೆಗಾಗಿ ಸಭೆಗೆ ಮಂಡಿಸಿದೆ.

ನಿರ್ಣಯ: **2014–15ನೇ ಸಾಲಿನಿಂದ ಜ್ಯೋತಿಷ್ಯ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳನ್ನು ಪ್ರಾರಂಭಿಸಲು, ಅಧ್ಯಯನ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಸಂಬಂಧ ತ್ರಿಸದಸ್ಯ ಸಮಿತಿಯು ಸಲ್ಲಿಸಿದ ವರದಿಗಳು, ಪರೀಕ್ಷಾ ಪದ್ಧತಿ, ಆದೇಶಗಳು, ಮುಂತಾದ ಎಲ್ಲ ಸವಿವರವಾದ ಮಾಹಿತಿಯನ್ನು ಮುಂದಿನ ಪ್ರಶಾಸನ ಸಮಿತಿಯ ಸಭೆಯಲ್ಲಿ ಮಂಡಿಸಲು ಸಭೆಯು ಸೂಚಿಸಿತು.**

**ವಿಷಯ 7: ಘಟಕ ಕಾಲೇಜಿನಲ್ಲಿರುವ ಸಭಾಂಗಣಕ್ಕೆ ಸೌಂಡ್ ಸಿಸ್ಟಮ್ ಮತ್ತು ಪ್ರೊಜೆಕ್ಟರ್‌ಗಳನ್ನು ಅಳವಡಿಸಿರುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿರುವ ಸಭಾಂಗಣಕ್ಕೆ ಸೌಂಡ್ ಸಿಸ್ಟಮ್ ಮತ್ತು ವಿಶ್ವವಿದ್ಯಾಲಯದ ಪಿಎಚ್.ಡಿ., ಎಂ.ಫಿಲ್. ಹಾಗೂ ಸಂಸ್ಕೃತ ಸಂಜೆ ಕಾಲೇಜಿನ ತರಗತಿಗಳಿಗಾಗಿ ಪ್ರೊಜೆಕ್ಟರ್‌ಅನ್ನು ಅಳವಡಿಸಲಾಗಿದೆ. ಇವುಗಳಿಗೆ ಕ್ರಮವಾಗಿ ರೂ. 30,005/– ಮತ್ತು ರೂ. 90,000/–ಗಳು ವೆಚ್ಚವಾಗಿವೆ. ಒಟ್ಟು **ರೂ. 1,20,005**/–ಗಳ ವೆಚ್ಚಕ್ಕೆ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

**ವಿಷಯ 8: ವಿಶ್ವವಿದ್ಯಾಲಯದ ಕಛೇರಿಗೆ ಹೊಸ ಝೆರಾಕ್ಸ್ ಯಂತ್ರ ಹಾಗೂ ಅಧ್ಯಯನಾಂಗಕ್ಕೆ ಎರಡು (2) ಕಂಪ್ಯೂಟರ್‌ಗಳನ್ನು ಖರೀದಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2013–14ನೇ ಸಾಲಿನಲ್ಲಿ ನಡೆಸಬೇಕಾಗಿದ್ದ ಪರೀಕ್ಷಾ ಗೌಪ್ಯಕಾರ್ಯಗಳಿಗಾಗಿ ಹಾಗೂ ಕಛೇರಿಯ ಬಳಕೆಗಾಗಿ ನೂತನ ಝೆರಾಕ್ಸ್ ಯಂತ್ರವನ್ನು ಖರೀದಿಸಲಾಗಿದೆ. ಇದರ ಬಾಬ್ತು ರೂ. 1,30,373/–ಗಳನ್ನು ಪಾವತಿಸಲಾಗಿದೆ. ಅಂತೆಯೇ, ಅಧ್ಯಯನಾಂಗದ ಕೆಲಸ–ಕಾರ್ಯಗಳ ನಿರ್ವಹಣೆಗಾಗಿ ಎರಡು (2) ಕಂಪ್ಯೂಟರ್‌ಗಳನ್ನು ಸರ್ಕಾರದ ಡಿ.ಜಿ.ಎಸ್&ಡಿ. ದರಪಟ್ಟಿ ಅನುಸಾರ ಖರೀದಿಸಲಾಗಿದ್ದು, ಇದರ ಬಾಬ್ತು ರೂ. 84,400/–ಗಳನ್ನು ಪಾವತಿಸಲಾಗಿದೆ. ಝೆರಾಕ್ಸ್ ಯಂತ್ರ ಮತ್ತು ಕಂಪ್ಯೂಟರ್‌ಗಳ ಖರೀದಿಗೆ ಮಾಡಿದ ಒಟ್ಟು **ರೂ. 2,14,773**/–ಗಳ ವೆಚ್ಚಕ್ಕೆ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ವಿಷಯ ಸಂಖ್ಯೆ 7 ಹಾಗೂ 8ಕ್ಕೆ ಸಂಬಂಧಿಸಿದಂತೆ ಮಾಡಿರುವ ವೆಚ್ಚದ ಬಗೆಗೆ ಕೊಟೇಷನ್, ತುಲನಾತ್ಮಕ ದರಪಟ್ಟಿ, ಶಿಫಾರಸ್ಸು, ಮುಂತಾದ ವಿಸ್ತೃತವಾದ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು. ವಿಶ್ವವಿದ್ಯಾಲಯವು ಭವಿಷ್ಯತ್ತಿನಲ್ಲಿ ಮಾಡಲಿರುವ ಖರ್ಚಿನ ವಿವರಗಳಿಗೆ ಸಂಬಂಧಿಸಿದಂತೆ ಬೆಂಗಳೂರು/ಮಂಗಳೂರು ವಿಶ್ವವಿದ್ಯಾಲಯಗಳ ಸಿಂಡಿಕೇಟ್ ವರದಿಗಳ ಮಾದರಿಯಲ್ಲಿ ವಿಶ್ವವಿದ್ಯಾಲಯದ ವರದಿಗಳನ್ನು ಪ್ರಸ್ತುತಪಡಿಸಲು ಪ್ರಶಾಸನ ಸಮಿತಿಯ ಸದಸ್ಯರಾದ ಪ್ರೊ. ಕೆ. ಈ. ರಾಧಾಕೃಷ್ಣ ಇವರು ಸಭೆಗೆ ತಿಳಿಸಿ, ಅವುಗಳ ಒಂದು ಪ್ರತಿಯನ್ನು ಪಡೆಯಲು ಕುಲಸಚಿವರಿಗೆ ಸೂಚಿಸಿದರು. ಇನ್ನು ಮುಂದೆ ಇಂತಹ ಪ್ರಸ್ತಾವನೆಗಳನ್ನು ವಿಶ್ವವಿದ್ಯಾಲಯದ 'ಖರೀದಿ ಸಮಿತಿ'ಯ ಮುಂದೆ ಮಂಡಿಸಿ ಅನುಮೋದನೆ ಪಡೆದು ಬಳಿಕ ಪ್ರಶಾಸನ ಸಮಿತಿಯ ಎದುರು ಮಂಡಿಸಲು ಸಭೆಯು ಸೂಚಿಸಿತು.**

**ವಿಷಯ 9: 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ನೌಕರರ ಸಂಘ'ದ ವತಿಯಿಂದ ಕಾರ್ಯಚಟುವಟಿಕೆಗಳನ್ನು ನಡೆಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೌಕರರ ಸಂಘವು ದಿನಾಂಕ: 30.04.2014ರಂದು ಅಧಿಕೃತವಾಗಿ ನೋಂದಣಿಯಾಗಿ ಅಸ್ತಿತ್ವಕ್ಕೆ ಬಂದಿದೆ. ಈ ಸಂಘದ ವತಿಯಿಂದ ಕಾರ್ಯಚಟುವಟಿಕೆಗಳನ್ನು ನಡೆಸಲು ಅಧ್ಯಕ್ಷರು ಅನುಮತಿಯನ್ನು ಕೋರಿರುತ್ತಾರೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೌಕರರ ಸಂಘವು ನಡೆಸುವ ಕಾರ್ಯಚಟುವಟಿಕೆಗಳಿಗೆ ಅನುಮೋದನೆ ನೀಡುವ ಸಂಬಂಧ, ಮೊದಲಿಗೆ ಸಂಘದ ಧ್ಯೇಯೋದ್ದೇಶಗಳು, ಅಧಿಕಾರಿ/ನೌಕಕರ ಜವಾಬ್ದಾರಿಗಳ ವಿವರಣೆಯನ್ನು ಪರಿಶೀಲಿಸಲು ಸಭೆಯು ಸೂಚಿಸಿತು. ಅಂತೆಯೇ ಸಂಘದ ಬೈಲಾಗಳ ಪ್ರತಿಯನ್ನು ಪ್ರಶಾಸನ ಸಮಿತಿಯ ಎಲ್ಲ ಸದಸ್ಯರಿಗೆ ಮುಂದಿನ ಸಭೆಯಲ್ಲಿ ನೀಡಲು ಸೂಚಿಸಲಾಯಿತು. ಈ ಸಂಘದ ವತಿಯಿಂದ ಕಾರ್ಯಚಟುವಟಿಕೆಗಳನ್ನು ನಡೆಸುವ ಬಗೆಗೆ ಕುಲಪತಿಗಳ ಮಾರ್ಗದರ್ಶನ ಪಡೆಯಲು ಸೂಚಿಸಲಾಯಿತು.**

**ವಿಷಯ 10: ವಿಶ್ವವಿದ್ಯಾಲಯದ ಸಿಬ್ಬಂದಿಯ ಈ ಹಿಂದಿನ ಸೇವಾ ಅವಧಿಯನ್ನು ಪಿಂಚಣಿ ಸೌಲಭ್ಯಕ್ಕೆ ಒಳಪಡಿಸುವ ಬಗೆಗೆ**

**ಪ್ರೊ. ಶ್ರೀನಿವಾಸ ವರಖೇಡಿ,** ಇವರು ದಿನಾಂಕ: 14.06.2013ರಿಂದ ಕ.ಸಂ.ವಿಶ್ವವಿದ್ಯಾಲಯದ ಶಾಸ್ತ್ರನಿಕಾಯದ ಪ್ರಾಧ್ಯಾಪಕರಾಗಿ ರೂ. 37,400–67,000 + AGP 10,000ರ ವೇತನಶ್ರೇಣಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರು ಈ ಹಿಂದೆ 11.08.2000ರಿಂದ 27.10.2002ರವರೆಗೆ ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು, ಇಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಮತ್ತು 28.10.2002ರಿಂದ 31.1.2008ರವರೆಗೆ ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಹಾಗೂ ಹೈದರಾಬಾದಿನ ಸಂಸ್ಕೃತ ಅಕಾಡೆಮಿಯ ನಿರ್ದೇಶಕರಾಗಿ 01.02.2008ರಿಂದ 31.03.2011ರವರೆಗೆ ಸೇವೆ ಸಲ್ಲಿಸಿ, 01.04.2013ರಿಂದ 13.06.2013ರವರೆಗೆ ಸಂ.ಶಿ.ನಿರ್ದೇಶನಾಲಯದ ನಿರ್ದೇಶಕರಾಗಿ ನಿಯೋಜನೆಯ ಮೇರೆಗೆ ಸೇವೆ ಸಲ್ಲಿಸಿ 13 ವರ್ಷಗಳ ಸೇವೆಯನ್ನು ಸಲ್ಲಿಸಿದ್ದಾರೆ.

**ಡಾ. ವಿ. ಗಿರೀಶ್ ಚಂದ್ರ,** ಇವರು ದಿನಾಂಕ: 18.06.2013ರಿಂದ ಕ.ಸಂ.ವಿಶ್ವವಿದ್ಯಾಲಯದ ಭಾಷಾ ನಿಕಾಯದ ಪ್ರಾಧ್ಯಾಪಕರಾಗಿ ರೂ.37,400–67,000 +AGP10,000ರ ವೇತನಶ್ರೇಣಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರು ಈ ಹಿಂದೆ 01.02.2003ರಿಂದ 11.02.2009ರವರೆಗೆ ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಹಿರಿಯ ವೇತನಶ್ರೇಣಿ ಉಪನ್ಯಾಸಕರಾಗಿ 6 ವರ್ಷ ಹಾಗೂ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ 12.02.2009ರಿಂದ 17.06.2013ರಿಂದ 4 ವರ್ಷಗಳ ಒಟ್ಟು 10 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

**ಶ್ರೀ ಪ್ರಕಾಶ ರುದ್ರಪ್ಪ ಪಾಗೋಜಿ,** ಇವರು ದಿನಾಂಕ: 28.09.2012ರಿಂದ ಕ.ಸಂ.ವಿಶ್ವವಿದ್ಯಾಲಯದ ಉಪಕುಲಸಚಿವರಾಗಿ ರೂ. 40,050–56,550ರ ವೇತನಶ್ರೇಣಿಯಲ್ಲಿ ನೇಮಕಗೊಂಡಿರುತ್ತಾರೆ. ಇವರು ಈ ಹಿಂದೆ 01.07.1995ರಿಂದ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜಾದ ಧಾರವಾಡದ ಸಿ.ಎಲ್.ವೈ. ಸಂಸ್ಕೃತ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ 17 ವರ್ಷಗಳ ಸೇವೆಯನ್ನು ಸಲ್ಲಿಸಿದ್ದಾರೆ.

**ವಿದ್ವಾನ್. ಎಂ. ಶಿವಮೂರ್ತಿ,** ಇವರು ದಿನಾಂಕ: 02.11.2012ರಿಂದ ಕ.ಸಂ.ವಿಶ್ವವಿದ್ಯಾಲಯದ ಶಾಖಾಧಿಕಾರಿಗಳಾಗಿ ರೂ.21,600–40,050ರ ವೇತನಶ್ರೇಣಿಯಲ್ಲಿ ನೇಮಕಗೊಂಡಿರುತ್ತಾರೆ. ಇವರು ಈ ಹಿಂದೆ 01.12.1996ರಿಂದ 31.10.2012ರವರೆಗೆ ಮೈಸೂರಿನ ಶ್ರೀ ಶಂಕರ ವಿಲಾಸ ಸಂಸ್ಕೃತ ಪಾಠಶಾಲೆಯಲ್ಲಿ ಸಹಶಿಕ್ಷಕರಾಗಿ 16 ವರ್ಷಗಳ ಸೇವೆಯನ್ನು ಸಲ್ಲಿಸಿದ್ದಾರೆ.

**ವಿದ್ವಾನ್ ಆರ್. ತಿಮ್ಮಣ್ಣ,** ಇವರು ದಿನಾಂಕ: 10.01.2013ರಿಂದ ಕ.ಸಂ.ವಿಶ್ವವಿದ್ಯಾಲಯದ ಯೋಜನಾ ಸಹಾಯಕರಾಗಿ ರೂ.21,600–40,050ರ ವೇತನಶ್ರೇಣಿಯಲ್ಲಿ ನೇಮಕಗೊಂಡಿರುತ್ತಾರೆ. ಇವರು ಈ ಹಿಂದೆ 03.09.2001ರಿಂದ 05.08.2010ರವರೆಗೆ ಶಿರಸಿಯ ಪ್ರೋಗ್ರೆಸ್ಸಿವ್ ಸಂಸ್ಕೃತ ಪಾಠಶಾಲೆಯಲ್ಲಿ ಮತ್ತು ಅಲ್ಲಿಂದ ವರ್ಗಾವಣೆಗೊಂಡು 06.08.2011ರಿಂದ 09.01.2013ರವರೆಗೆ ನಾಗಮಂಗಲದ ಶ್ರೀವಾಣೀಭೂಷಣ ಸಂಸ್ಕೃತ ಪಾಠಶಾಲೆಯಲ್ಲಿ ಸಹಶಿಕ್ಷಕರಾಗಿ ಒಟ್ಟು 12 ವರ್ಷಗಳ ಸೇವೆಯನ್ನು ಸಲ್ಲಿಸಿದ್ದಾರೆ.

**ವಿದುಷಿ ಸಾವಿತ್ರಿ ಪೂಜಾರಿ,** ಇವರು ದಿನಾಂಕ: 01.06.2013ರಿಂದ ಕ.ಸಂ.ವಿಶ್ವವಿದ್ಯಾಲಯದ ಯೋಜನಾ ಸಹಾಯಕರಾಗಿ ರೂ. 21,600–40,050ರ ವೇತನಶ್ರೇಣಿಯಲ್ಲಿ ನೇಮಕಗೊಂಡಿರುತ್ತಾರೆ. ಇವರು ಈ ಹಿಂದೆ 31.05.2003ರಿಂದ 31.05.2013ರವರೆಗೆ ಕೆ.ಆರ್. ನಗರದ ಶ್ರೀ ಆದಿಚುಂಚನಗಿರಿ ಸಂಸ್ಕೃತ ಪಾಠಶಾಲೆಯಲ್ಲಿ ಸಹಶಿಕ್ಷಕರಾಗಿ ಒಟ್ಟು 10 ವರ್ಷಗಳ ಸೇವೆಯನ್ನು ಸಲ್ಲಿಸಿದ್ದಾರೆ.

ಈ ಸಿಬ್ಬಂದಿಯ ಹಿಂದಿನ ಸೇವೆಯನ್ನು ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಈ ಮೇಲ್ಕಾಣಿಸಿದ ವಿಶ್ವವಿದ್ಯಾಲಯದ ಸಿಬ್ಬಂದಿಯ ವಿವರಗಳನ್ನು ಪರಿಶೀಲಿಸಿ ವಿಸ್ತೃತವಾದ ಚರ್ಚೆ ನಡೆಸಿತು. ಕರ್ನಾಟಕ ಸರ್ಕಾರೀ ಸೇವಾ ನಿಯಮಗಳು ಹಾಗೂ ಆದೇಶಗಳನ್ವಯ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲು ಸಭೆಯು ಅನುಮೋದನೆ ನೀಡಿತು.**

**ವಿಷಯ 11: ಪ್ರೊ. ವೈ.ಎಸ್.ಸಿದ್ದೇಗೌಡ, ಇವರ ಒಂದು ದಿನದ ವೇತನವನ್ನು ಪಾವತಿಸಲು ಅನುಮೋದಿಸುವ ಬಗ್ಗೆ**

ಟಿಪ್ಪಣಿ: ಪ್ರೊ. ವೈ.ಎಸ್. ಸಿದ್ದೇಗೌಡ, ಇವರು ದಿನಾಂಕ 03.2.2012ರಿಂದ 05.10.2013ರವರೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರ ಹುದ್ದೆಯ ಕರ್ತವ್ಯ ನಿರ್ವಹಿಸಿದ್ದು, ದಿನಾಂಕ 05.10.2013ರವರೆಗೆ ವೇತನವನ್ನು ಪಾವತಿಸಲಾಗಿದೆ. ದಿನಾಂಕ 07.10.2013ರ ಸೋಮವಾರ ಮಾತೃಸಂಸ್ಥೆಯಾದ ಮೈಸೂರು ವಿಶ್ವವಿದ್ಯಾಲಯದ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ದಿನಾಂಕ: 06.10.2013ರ ಒಂದು ದಿನದ ವೇತನವನ್ನು ಕರ್ನಾಟಕ ಸರ್ಕಾರದ ಸೇವಾ

ನಿಯಮ 87ರ ಪ್ರಕಾರ ನಿಯೋಜನೆಗೆ ಒಳಗಾಗಿದ್ದ ವಿ.ವಿ.ಯಿಂದ ಪಡೆಯಲು ಮನವಿ ಸಲ್ಲಿಸಿರುತ್ತಾರೆ. ಸಭೆಯ ಅನುಮೋದನೆಗೆ ಮಂಡಿಸಿದೆ.

ನಿರ್ಣಯ: **ಪ್ರೊ. ವೈ. ಎಸ್. ಸಿದ್ದೇಗೌಡ, ಇವರ ಬಿಡುಗಡೆಯ ನಂತರ ದಿನಾಂಕ 06.10.2013ರ ಒಂದು ದಿನದ ವೇತನವನ್ನು ಸರ್ಕಾರಿ ನಿಯಮಗಳ ಪ್ರಕಾರ ಅವರ ಮಾತೃಸಂಸ್ಥೆಯೇ ಭರಿಸಬೇಕೆಂದು ಸಭೆಯು ಅಭಿಪ್ರಾಯಪಟ್ಟಿತು. ಈ ಸಂಬಂಧ ಪತ್ರವನ್ನು ಬರೆದು ತಿಳಿಸುವಂತೆ ಸಭೆಯು ಸೂಚಿಸಿತು.**

**ವಿಷಯ 12: ಶ್ರೀ ನಾಗೇಶ ಎಸ್. ಡೋಂಗರೆ –ಇವರ ಮೂರು ದಿನಗಳ ವೇತನವನ್ನು ಪಾವತಿಸಲು ಅನುಮೋದಿಸುವ ಬಗ್ಗೆ.**

ಟಿಪ್ಪಣಿ: ಶ್ರೀ ನಾಗೇಶ ಎಸ್. ಡೋಂಗರೆ ಇವರು ದಿನಾಂಕ: 03.08.2011ರಿಂದ 30.11.2012ರವರೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಇವರು ದಿನಾಂಕ: 29.07.2011ರಿಂದ 02.08.2011ರವರೆಗೆ ಸ್ಥಳ ನೇಮಕಾತಿಗಾಗಿ ಕಾಯ್ದು ಅವಧಿಯನ್ನು ಕರ್ನಾಟಕ ನಾಗರಿಕ ಸೇವಾನಿಯಮ 8(15)ಎಫ್ ಪ್ರಕಾರ ಕಡ್ಡಾಯ ನಿರೀಕ್ಷಣಾ ಅವಧಿಯೆಂದು ಪರಿಗಣಿಸುವಂತೆ ಉನ್ನತ ಶಿಕ್ಷಣ ಇಲಾಖೆ ಸೂಚಿಸಿದೆ (ಸಂಖ್ಯೆ: ಇಡಿ 403 ಯುಆರ್‌ಸಿ 2013; ದಿನಾಂಕ: 26.04.2014). ಈ ಹಿನ್ನೆಲೆಯಲ್ಲಿ ಇವರಿಗೆ ಐದು ದಿನಗಳ ವೇತನವನ್ನು ಪಾವತಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ.

ನಿರ್ಣಯ: **ಶ್ರೀ ನಾಗೇಶ ಎಸ್. ಡೋಂಗರೆ, ಇವರ ಐದು ದಿನಗಳ ವೇತನವನ್ನು ಕರ್ನಾಟಕ ನಾಗರಿಕ ಸೇವಾ ನಿಯಮ 8(15)ಎಫ್ ಪ್ರಕಾರ ಪಾವತಿಸಲು ಸಭೆಯು ಒಪ್ಪಿಗೆ ಸೂಚಿಸಿತು.**

**ವಿಷಯ 13: ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ – ಈ ಕಾಲೇಜಿನ ಕಟ್ಟಡದ ನಿರ್ಮಾಣದ ಬಗೆಗೆ.**

ಟಿಪ್ಪಣಿ: ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಮಹಾವಿದ್ಯಾಲಯ, ಗೋಕರ್ಣ – ಈ ಕಾಲೇಜಿಗೆ ಕಾಂಪೌಂಡ್ ಗೋಡೆ ಕಟ್ಟಿಸಲು ಈ ಹಿಂದೆ ಸರ್ಕಾರದಿಂದ ರೂ. 8.5 ಲಕ್ಷಗಳು ಮಂಜೂರಾಗಿರುತ್ತವೆ. ಈ ಮೊತ್ತವನ್ನು ಕಾಲೇಜಿನ ವಿದ್ಯಾರ್ಥಿನಿಲಯದ ಕಟ್ಟಡದ ನಿರ್ಮಾಣಕ್ಕಾಗಿ ವಿನಿಯೋಗಿಸಲು ಕೋರಿ ಪತ್ರಿಸಿರುತ್ತಾರೆ. ಸದರಿ ಕಾಲೇಜಿನ ಪ್ರಾಚಾರ್ಯರು ಸಂಬಂಧಿಸಿದ ಸರ್ಕಾರೀ ಇಲಾಖೆಯ ಅನುಮತಿ ಪಡೆದು ಈ ಕಾಮಗಾರಿ ಕೈಗೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಮಹಾವಿದ್ಯಾಲಯ, ಗೋಕರ್ಣ – ಈ ಕಾಲೇಜಿಗೆ ಕಾಂಪೌಂಡ್ ಗೋಡೆ ಕಟ್ಟಿಸಲು ಈ ಹಿಂದೆ ಸರ್ಕಾರದಿಂದ ರೂ. 8.5 ಲಕ್ಷಗಳು ಮಂಜೂರಾಗಿರುತ್ತವೆ. ಈ ಮೊತ್ತವನ್ನು ಕಾಲೇಜಿನ ವಿದ್ಯಾರ್ಥಿನಿಲಯದ ಕಟ್ಟಡದ ನಿರ್ಮಾಣಕ್ಕಾಗಿ ವಿನಿಯೋಗಿಸಲು ಕೋರಿ ಪತ್ರಿಸಿರುತ್ತಾರೆ. ಸದರಿ ಕಾಲೇಜಿನ ಪ್ರಾಚಾರ್ಯರು ಸಂಬಂಧಿಸಿದ ಸರ್ಕಾರೀ ಇಲಾಖೆಯ ಅನುಮತಿ ಪಡೆದು ಈ ಕಾಮಗಾರಿ ಕೈಗೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.ಸಭೆಯು ಒಪ್ಪಿಗೆ ಸೂಚಿಸಿತು.**

**ವಿಷಯ 14: ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ –ಈ ಕಾಲೇಜಿಗೆ ಬೋಧಕ ಸಿಬ್ಬಂದಿಯ ನಿಯೋಜನೆಯ ಬಗೆಗೆ.**

ಟಿಪ್ಪಣಿ: ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಮಹಾವಿದ್ಯಾಲಯ, ಗೋಕರ್ಣ – ಈ ಕಾಲೇಜಿಗೆ ಧಾರವಾಡದ ಸಿ.ಎಲ್.ವೈ. ಸಂಸ್ಕೃತ ಕಾಲೇಜು ಹಾಗೂ ಶ್ರೀಮಾತಾ ಸಂಸ್ಕೃತ ಕಾಲೇಜಿನ ಅಧ್ಯಾಪಕರನ್ನು ನಿಯೋಜಿಸಲಾಗಿತ್ತು. ಸದರಿ ಸಿಬ್ಬಂದಿ ನಿಯೋಜನೆಯನ್ನು ರದ್ದುಗೊಳಿಸುವಂತೆ ಸೂಕ್ತ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಮನವಿ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಇವರ ನಿಯೋಜನೆಯನ್ನು ರದ್ದುಪಡಿಸುವ ಬಗೆಗೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ವಿಶ್ವವಿದ್ಯಾಲಯದಿಂದ ನಿಯೋಜಿತರಾಗಿದ್ದ ಡಾ. ಮಂಜುನಾಥ ಭಟ್ಟ, ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರನಿಕಾಯ, ಕ.ಸಂ.ವಿ, ಇವರು ವೈಯಕ್ತಿಕ ಕಾರಣದಿಂದ ಗೋಕರ್ಣ ಕಾಲೇಜಿಗೆ ನಿಯೋಜಿಸುವುದನ್ನು ರದ್ದುಪಡಿಸಿ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುವಂತೆ ಕೋರಿರುತ್ತಾರೆ. ಇವರ ಬದಲಿಗೆ, ವಿದ್ವಾನ್ ಕೆ.ಎಲ್. ರಾಘವ, ಯೋಜನಾ ಸಹಾಯಕರು, ಕ.ಸಂ.ವಿ, ಇವರು ಪರಸ್ಪರ ವರ್ಗಾವಣೆ ಮೂಲಕ ಗೋಕರ್ಣ ಕಾಲೇಜಿನಲ್ಲಿ ಕಾರ್ಯನಿರ್ವಹಿಸಲು ಒಪ್ಪಿಗೆ ಸೂಚಿಸಿರುತ್ತಾರೆ. ಇವರಿಬ್ಬರ ಪರಸ್ಪರ ವರ್ಗಾವಣೆಗೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಮಹಾವಿದ್ಯಾಲಯ, ಗೋಕರ್ಣ – ಈ ಕಾಲೇಜಿಗೆ ನಿಯೋಜಿಸಲ್ಪಟ್ಟ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜಿನ ಸಿಬ್ಬಂದಿಯ ಸೇವೆಯನ್ನು ಮಾತೃ ಇಲಾಖೆಗೆ ಹಿಂದಿರುಗಿಸಲು ಒಪ್ಪಲಾಯಿತು. ಮತ್ತು**

**ವಿಶ್ವವಿದ್ಯಾಲಯದ ನಿಯೋಜಿತ ಸಿಬ್ಬಂದಿಗಳಾದ ಡಾ. ಮಂಜುನಾಥ ಭಟ್ಟ ಹಾಗೂ ವಿದ್ವಾನ್ ಕೆ. ಎಲ್. ರಾಘವ, ಇವರ ಪರಸ್ಪರ ಒಮ್ಮತದ ವರ್ಗಾವಣೆಯನ್ನು ಅಂಗೀಕರಿಸಲಾಯಿತು.**

**ವಿಷಯ 15: ದಿನಾಂಕ 30.05.2014ರಂದು ವಿದ್ವಾನ್ ಪ್ರಕಾಶ್ ಆರ್. ಪಾಗೋಜಿ, ಉಪಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು – ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿದ ಆದೇಶವನ್ನು ಅನೂರ್ಜಿತಗೊಳಿಸಿರುವ ಬಗೆಗೆ**

ಟಿಪ್ಪಣಿ: ವಿದ್ವಾನ್ ಪ್ರಕಾಶ್ ಆರ್. ಪಾಗೋಜಿ, ಉಪಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು – ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಅಂದಿನ ಕುಲಸಚಿವರಾದ ಪ್ರೊ. ಪಿ.ಬಿ. ಸಂತಪ್ಪನವರ ಅವರು ದಿನಾಂಕ: 30.05.2014ರಂದು ಆದೇಶಿಸಿದ್ದರು. ಆದರೆ, ಈ ವಿಷಯವನ್ನು ಮಾನ್ಯ ಕುಲಪತಿಗಳಿಗೆ ತರದೆಯೇ ನಿರ್ಣಯ ಕೈಗೊಳ್ಳಲಾಗಿತ್ತು. ಮಾನ್ಯ ಕುಲಪತಿಗಳು 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009'ರ ಅಧ್ಯಾಯ–3; 2, 3, 4(ಎ) ನಿಯಮಗಳ ಪ್ರಕಾರ ತಮಗೆ ಪ್ರದತ್ತವಾದ ಅಧಿಕಾರದಿಂದ, ಪ್ರೊ. ಪಿ.ಬಿ. ಸಂತಪ್ಪನವರ ಅವರು ಹೊರಡಿಸಿರುವ ಆದೇಶವು ಕ್ರಮಬದ್ಧವಾಗಿಲ್ಲದಿರುವುದರಿಂದ ಅಮಾನತ್ತು ಆದೇಶವನ್ನು ಅನೂರ್ಜಿತಗೊಳಿಸಿರುತ್ತಾರೆ. ಸಭೆಯ ಅವಗಾಹನೆಗಾಗಿ ಮಂಡಿಸಿದೆ.

ನಿರ್ಣಯ: **ವಿದ್ವಾನ್ ಪ್ರಕಾಶ ಆರ್. ಪಾಗೋಜಿ, ಉಪಕುಲಸಚಿವರು, ಇವರ ಅಮಾನತ್ತಿಗೆ ಸಂಬಂಧಿಸಿದಂತೆ, ಹಿಂದಿನ ಕುಲಸಚಿವರು ಮಾನ್ಯ ಕುಲಪತಿಗಳ ಗಮನಕ್ಕೆ ತಾರದೆಯೇ ಹೊರಡಿಸಿದ ಕ್ರಮಬದ್ಧವಲ್ಲದ ಈ ಅಮಾನತ್ತಿನ ಆದೇಶವನ್ನು ಪ್ರಶಾಸನ ಸಮಿತಿಯು ಮಾನ್ಯ ಮಾಡಲಾಗುವುದಿಲ್ಲವೆಂದು ನಿರ್ಣಯಿಸಿತು.**

**ವಿಷಯ 16: ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕವಾಗಿ ಮಹಿಳಾ ಶೌಚಾಲಯ ನಿರ್ಮಾಣದ ವೆಚ್ಚಕ್ಕಾಗಿ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಬ್ಬಂದಿಗಳಲ್ಲಿ ಸುಮಾರು ಶೇಕಡಾ 25ರಷ್ಟು ಮಹಿಳಾ ಸಿಬ್ಬಂದಿಗಳಿದ್ದಾರೆ. ಇವರಿಗೆ ಪ್ರತ್ಯೇಕವಾದ ಮಹಿಳಾ ಶೌಚಾಲಯದ ಅವಶ್ಯಕತೆಯಿದ್ದು, ಇದರ ನಿರ್ಮಾಣಕ್ಕಾಗಿ ಹಾಗು ಅದಕ್ಕೆ ತಗಲುವ ವೆಚ್ಚಕ್ಕಾಗಿ ಅನುಮೋದನೆಗಾಗಿ ಸಭೆಗೆ ಮಂಡಿಸಿದೆ.

ನಿರ್ಣಯ: **ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕ ಮಹಿಳಾ ಶೌಚಾಲಯ ನಿರ್ಮಾಣಕ್ಕೆ ಹಾಗೂ ಅದಕ್ಕೆ ತಗಲುವ ವೆಚ್ಚಕ್ಕೆ ಅನುಮೋದನೆ ನೀಡಿತು. ಈ ಕೂಡಲೇ ತ್ವರಿತಗತಿಯಲ್ಲಿ ಈ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸೂಚಿಸಿತು.**

**ವಿಷಯ 17: ವಿಶ್ವವಿದ್ಯಾಲಯದಲ್ಲಿ ಸಿಸಿಟಿವಿ ಕ್ಯಾಮರಾ ಹಾಗೂ ದೂರದರ್ಶನವನ್ನು ಅಳವಡಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸುರಕ್ಷತೆಯ ದೃಷ್ಟಿಯಿಂದ ಸಿಸಿಟಿವಿ ಕ್ಯಾಮರಾ ಯಂತ್ರವನ್ನು ಅಳವಡಿಸಬೇಕಾಗಿದೆ.

ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ತಿಳಿಯಲು ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ದೂರದರ್ಶನ ಯಂತ್ರ (ಡಿವಿಡಿ ಪ್ಲೇಯರ್ ಸಹಿತ) ವನ್ನು ಖರೀದಿಸಿ ಅಳವಡಿಸಬೇಕಾಗಿದೆ. ಇವುಗಳಿಗೆ ತಗಲುವ ವೆಚ್ಚದ ಅನುಮೋದನೆಗಾಗಿ ಸಭೆಗೆ ಮಂಡಿಸಿದೆ.

ನಿರ್ಣಯ: **ವಿಶ್ವವಿದ್ಯಾಲಯದಲ್ಲಿ ಸಿ.ಸಿ.ಟಿ.ವಿ ಕ್ಯಾಮರಾ ಹಾಗೂ ದೂರದರ್ಶನ ಅಳವಡಿಕೆಗೆ ಸಂಬಂಧ ತಗಲುವ ಅಂದಾಜು ವೆಚ್ಚವನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.**

**ವಿಷಯ 18: ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕವಾಗಿ ಪರೀಕ್ಷಾವಿಭಾಗವನ್ನು ಪ್ರಾರಂಭಿಸುವ ಬಗೆಗೆ**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕವಾಗಿ ಪರೀಕ್ಷಾ ವಿಭಾಗವನ್ನು ಆರಂಭಿಸಿ ವ್ಯವಸ್ಥಿತಗೊಳಿಸುವ ಅವಶ್ಯಕತೆಯಿದೆ. ಇದಕ್ಕಾಗಿ ಎರಡು ಗಣಕಯಂತ್ರಗಳು, ಪ್ರಿಂಟರ್, ಸ್ಕ್ಯಾನರ್, ಕಬ್ಬಿಣದ ಪೆಟ್ಟಿಗೆ, ಅಲಮೆರಾ, ಪರೀಕ್ಷೆಗೆ ಸಂಬಂಧಿಸಿದ ಆಧುನಿಕ ಸಾಫ್ಟವೇರ್ ಮುಂತಾದ ಸಾಮಗ್ರಿಗಳನ್ನು ಹೊಂದಿರುವ ಪರೀಕ್ಷಾ ವಿಭಾಗವನ್ನು ವ್ಯವಸ್ಥಿತಗೊಳಿಸಲು ಅಂದಾಜು 3.00ಲಕ್ಷ ರೂಗಳ ಅವಶ್ಯಕತೆಯಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಈ ಸಂಬಂಧ ಕ್ರಮವಹಿಸಲು ಅನುಮೋದನೆ ಪಡೆಯಲಾಯಿತು. ವಿಶ್ವವಿದ್ಯಾಲಯದ ಪರೀಕ್ಷಾ ಸಾಮಗ್ರಿಗಳ ಖರೀದಿಗೆ ಸಂಬಂಧಿಸಿದಂತೆ ತಗಲುವ ವೆಚ್ಚದ ವಿಸ್ತೃತ ಪಟ್ಟಿ, ತುಲನಾತ್ಮಕ ದರಪಟ್ಟಿ ಮುಂತಾದ ವಿವರಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು. ಹಾಗೂ ಪರೀಕ್ಷಾಂಗಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ, ಪ್ರಶಾಸನ ಸಮಿತಿಯ ಒಬ್ಬ ಸದಸ್ಯರು, ಹಣಕಾಸು ಅಧಿಕಾರಿ ಹಾಗೂ ಪರೀಕ್ಷಾಂಗದ ಸಂಚಾಲಕರನ್ನು ಒಳಗೊಂಡ ಸಮಿತಿಯನ್ನು ರಚಿಸಲು ಸಭೆಯು ಸೂಚಿಸಿತು.**

**ವಿಷಯ 19: ವಿಶ್ವವಿದ್ಯಾಲಯದಲ್ಲಿ ಕುಲಸಚಿವರ ಕಛೇರಿಯ ನವೀಕರಣದ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರ ಕಛೇರಿಯನ್ನು ನವೀಕರಿಸುವ ಅವಶ್ಯಕತೆಯಿದ್ದು, ವುಡನ್ ಫಿನಿಶಿಂಗ್, ಕ್ಯಾಬಿನ್ ಮರುಜೋಡಣೆ, ಗಣಕಯಂತ್ರ, ಪ್ರಿಂಟರ್, ಸ್ಕ್ಯಾನರ್, ಅಲಮೆರಾ, ಫ್ಯಾನ್ ಇವುಗಳನ್ನು ಖರೀದಿಸಿ ಅಳವಡಿಸಲು 1.00ಲಕ್ಷ ರೂಗಳ ಅವಶ್ಯಕತೆಯಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ವಿಶ್ವವಿದ್ಯಾಲಯದ ಕುಲಸಚಿವರ ಕಛೇರಿಯ ನವೀಕರಣಕ್ಕೆ ಹಾಗೂ ಅದಕ್ಕೆ ತಗಲುವ ವೆಚ್ಚಕ್ಕೆ ಅನುಮೋದನೆ ನೀಡಿತು. ವಿವರಗಳನ್ನು ಮುಂದಿನ ಸಭೆಯಲ್ಲಿ ಮಂಡಿಸುವಂತೆ ಸೂಚಿಸಲಾಯಿತು.**

**ವಿಷಯ 20: ವಿಶ್ವವಿದ್ಯಾಲಯದ ಕಛೇರಿಯ ಮೊದಲಂತಸ್ಥಿನ ನಿರ್ಮಾಣಕ್ಕಾಗಿ ಪಿಡಬ್ಲ್ಯೂಡಿ ಇಲಾಖೆಗೆ ವಹಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಎಂಫಿಲ್, ಪಿಎಚ್.ಡಿ ಮುಂತಾದ ಅನೇಕ ತರಗತಿಗಳು ನಡೆಯುತ್ತಿದ್ದು, ಈ ತರಗತಿಗಳನ್ನು ನಡೆಸಲು ಸ್ಥಳಾವಕಾಶದ ಕೊರತೆಯಿದೆ. ಈ ಕೊರತೆಯನ್ನು ಸರಿದೂಗಿಸಲು ವಿಶ್ವವಿದ್ಯಾಲಯದ ಈಗಿರುವ ಆಡಳಿತ ಕಛೇರಿಯ ಮೊದಲ ಅಂತಸ್ಥಿನಲ್ಲಿ ತಾತ್ಕಾಲಿಕವಾಗಿ ಶೀಟ್‌ಗಳನ್ನು ಅಳವಡಿಸಿ ತರಗತಿಗಳನ್ನು ನಡೆಸಬಹುದಾಗಿದೆ. ಈ ಕಾರ್ಯವನ್ನು ಸರ್ಕಾರದ ಪಿಡಬ್ಲ್ಯೂಡಿ ಇಲಾಖೆಗೆ ವಹಿಸಬೇಕಾಗಿದೆ. ಈ ಸಂಬಂಧ ವಿಶ್ವವಿದ್ಯಾಲಯದ ಹಣಕಾಸು ಸಮಿತಿಯಲ್ಲಿ ಇದಕ್ಕೆ ತಗಲುವ ವೆಚ್ಚವನ್ನು ಬರಿಸಲು ಅನುಮೋದನೆ ಪಡೆಯಲಾಗಿದೆ.

ನಿರ್ಣಯ: **ವಿಶ್ವವಿದ್ಯಾಲಯವು ನಡೆಸುತ್ತಿರುವ ಎಂ.ಫಿಲ್. ಪಿಎಚ್.ಡಿ ಕೋರ್ಸುಗಳ ತರಗತಿಗಳನ್ನು ನಡೆಸಲು ಸ್ಥಳಾವಕಾಶದ ಕೊರತೆಯ ಹಿನ್ನೆಲೆಯಲ್ಲಿ ಈಗಿರುವ ಆಡಳಿತ ಕಛೇರಿಯ ಮೊದಲ ಅಂತಸ್ತಿನಲ್ಲಿ ತಾತ್ಕಾಲಿಕವಾಗಿ ಶೀಟ್‌ಗಳನ್ನು ಅಳವಡಿಸಿ ತರಗತಿಗಳನ್ನು ನಡೆಸಲು ಸಭೆಯು ಅನುಮೋದಿಸಿತು. ಕಟ್ಟಡದ ನಿರ್ಮಾಣಕ್ಕೆ ಸಂಬಂಧಿಸಿದಂತೆ ಭೂಸೇನೆ/ನಿರ್ಮಿತಿ ಕೇಂದ್ರ/ಪಿಡಬ್ಲೂಡಿ/ಪೋಲೀಸ್ ಗೃಹ ನಿರ್ಮಾಣ ನಿಗಮ/ಲೋಕೋಪಯೋಗಿ ಇಲಾಖೆ – ಈ ಸಂಸ್ಥೆಗಳಲ್ಲಿ ಯಾವುದಾದರೂ ಒಂದು ಸಂಸ್ಥೆಗೆ ಕೆಲಸದ ಜವಾಬ್ದಾರಿಯನ್ನು ವಹಿಸಬಹುದೆಂದು ಸಭೆಯು ಸೂಚಿಸಿತು.**

**ವಿಷಯ 21: ಮಾನಸೋಲ್ಲಾಸ ಗ್ರಂಥ ಪ್ರಕಟಣಾ ಅನುವಾದ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸುವ ಬಗೆಗೆ**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2012–13ನೇ ಸಾಲಿನಲ್ಲಿ ಮಾನಸೋಲ್ಲಾಸ ಗ್ರಂಥ ಪ್ರಕಟಣಾ ಅನುವಾದ ಯೋಜನೆಯನ್ನು ಪ್ರಾರಂಭಿಸಿತು. ಇದು ಕಾಲ ನಿಗದಿತ ಯೋಜನೆಯಾಗಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಇದಕ್ಕೆ 10ಲಕ್ಷರೂಗಳ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. ಅನೇಕ ತಜ್ಞ ವಿದ್ವಾಂಸರಿಗೆ ಈ ಯೋಜನೆಯ ಅನುವಾದ ಕಾರ್ಯವನ್ನು ವಹಿಸಲಾಗಿತ್ತು. ಈವರೆಗೆ ಶೇಕಡಾ 80ರಷ್ಟು ಅನುವಾದ ಕಾರ್ಯವು ಮುಗಿದಿದ್ದು, ಶೇಕಡಾ20 ಕಾರ್ಯವು ಬಾಕಿ ಇದೆ. 30 ಶೇಕಡಾ ಪರಿಷ್ಕಾರ ಕಾರ್ಯವು ಮುಗಿದಿದೆ. ಈ ಯೋಜನೆಯು ಪ್ರಾರಂಭವಾಗಿ ಎರಡು ವರ್ಷಗಳು ಕಳೆದಿದ್ದು, ಇದೀಗ ಈ ಮೂರನೇ ವರ್ಷದಲ್ಲಿ ಈ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕಿದೆ. ಸುಮಾರು 5,500 ಶ್ಲೋಕಗಳ ಅನುವಾದ ಕಾರ್ಯವು ಪೂರ್ಣಗೊಂಡಿದ್ದು, 500ಪುಟಗಳ ಮೂರು ಸಂಪುಟಗಳಾಗಿ ಗ್ರಂಥಗಳು ಹೊರಬರಲಿವೆ. ಈ ಯೋಜನೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸದೇಹೋದಲ್ಲಿ ಅನುದಾನವನ್ನು ಹಿಂದಿರುಗಿಸಬೇಕಾಗುತ್ತದೆ. ಈ ಸಂಬಂಧ ಈ ಯೋಜನೆಯ ಸಂಪಾದಕರಾಗಿ ತಜ್ಞ ವಿದ್ವಾಂಸರನ್ನು ನಿಯೋಜಿಸಬೇಕಿದೆ. ಹಾಗೂ ವಿಶ್ವವಿದ್ಯಾಲಯದ ಸಿಬ್ಬಂದಿಯನ್ನು ಸಂಯೋಜಕರಾಗಿ ನಿಯೋಜಿಸಬಹುದಾಗಿದೆ. ಸಭೆಯಲ್ಲಿ ಚರ್ಚಿಸಿ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ವಿಶ್ವವಿದ್ಯಾಲಯದ ಮಾನಸೋಲ್ಲಾಸ ಅನುವಾದ ಹಾಗೂ ಗ್ರಂಥ ಪ್ರಕಟಣೆ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕಾದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳು ನೀಡಿದ ವಿವರಗಳನ್ನು ಕೇಳಿದ ಸಭೆಯು ತಜ್ಞ ವಿದ್ವಾಂಸರ ನಿಯೋಜನೆಯ ಬಗೆಗೆ ಕುಲಪತಿಗಳೇ ಸೂಕ್ತ ನಿರ್ಧಾರ ಕೈಗೊಳ್ಳಬಹುದೆಂದು ನಿರ್ಣಯಾಧಿಕಾರವನ್ನು ಕುಲಪತಿಗಳಿಗೆ ನೀಡಲಾಯಿತು. ಪ್ರಶಾಸನ ಸಮಿತಿಯ ಮಾನ್ಯ ಸದಸ್ಯರಾದ ಡಾ. ವನಿತಾ ರಾಮಸ್ವಾಮಿಯವರು, ಈ ಹಿಂದೆ ಈ ಕಾರ್ಯ ನಿರ್ವಹಿಸಿದ ಅನುಭವವಿರುವ ನಿವೃತ್ತ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಇವರಿಗೆ ಈ ಕಾರ್ಯವನ್ನು ವಹಿಸಬಹುದೆಂದು ಅಭಿಪ್ರಾಯಪಟ್ಟರು. ಮುಂದಿನ ಆರು ತಿಂಗಳಿನಲ್ಲಿ ಈ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಲು ಸಭೆಯು ಸೂಚಿಸಿತು.**

**ವಿಷಯ 22: ವಿಶ್ವವಿದ್ಯಾಲಯದ ಕಡಿಮೆ ಮೊತ್ತದ ಹಣಕಾಸಿನ ವ್ಯವಹಾರಗಳನ್ನು ಕುಲಸಚಿವರ ಹಂತದಲ್ಲಿಯೇ ನಿರ್ವಹಿಸುವ ಬಗೆಗೆ**

ಟಿಪ್ಪಣಿ: ವಿಶ್ವವಿದ್ಯಾಲಯದ ಹಣಕಾಸು ವ್ಯವಹಾರಗಳ ಪರಿನಿಯಮದ ಅಂಗೀಕಾರದವರೆಗೆ ರೂ. 5000/–ಗಳ ಒಳಗಿನ ಮೊತ್ತದ ಅನುಮೋದನೆಯನ್ನು ಕುಲಸಚಿವರ ಹಂತದಲ್ಲಿಯೇ ಪಡೆಯಬಹುದಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ರೂ. 5000/–ಗಳ ಒಳಗಿನ ವೆಚ್ಚಕ್ಕೆ ಸಂಬಂಧಿಸಿದಂತೆ, ಅನುಮೋದನೆಯನ್ನು ಕುಲಸಚಿವರ ಹಂತದಲ್ಲಿಯೇ ಪಡೆಯಲು ಸಭೆಯ ಅನುಮೋದಿಸಿತು.**

**ವಿಷಯ 23: "ಸಂಸ್ಕೃತ ಮಾಸ"ದಲ್ಲಿ ವಿವಿಧ ಕಾರ್ಯಕ್ರಮಗಳನ್ನು ವಿಶ್ವವಿದ್ಯಾಲಯದ ಹಂತದಲ್ಲಿ ನಡೆಸುವ ಬಗೆಗೆ**

ಟಿಪ್ಪಣಿ: ಕೇಂದ್ರ ಸರ್ಕಾರವು ಶ್ರಾವಣ ಮಾಸವನ್ನು **ಸಂಸ್ಕೃತ ಮಾಸ**ವೆಂದು ಘೋಷಿಸಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಹಂತದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಬಹುದಾಗಿದೆ. ಆಹ್ವಾನಿತ ವಿದ್ವಾಂಸರಿಂದ **ಕವಿಗೋಷ್ಠಿ**ಯ ಆಯೋಜನೆ, ವಿವಿಧ ಸಂಸ್ಕೃತ ಕಾಲೇಜುಗಳಿಂದ **ಏಕಾಂಕ ನಾಟಕ ಸ್ಪರ್ಧೆ**ಗಳು, ಇವುಗಳನ್ನು ನಡೆಸಬಹುದಾಗಿದೆ. ಏಕಾಂಕ ನಾಟಕ ಸ್ಪರ್ಧೆಗಳ ಪ್ರಥಮ, ದ್ವಿತೀಯ ಮತ್ತು ತೃತೀಯ ಹಾಗೂ ಸಮಾಧಾನಕರ ಬಹುಮಾನದ ಮೊತ್ತವನ್ನು ಕ್ರಮವಾಗಿ ರೂ. 5000/–, ರೂ. 3000/–, ರೂ, 1500/–, ರೂ. 1000/–ಗಳಿಗೆ ನಿಗದಿಪಡಿಸಬಹುದಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಂಸ್ಕೃತ ಮಾಸದ ಕಾರ್ಯಕ್ರಮಗಳನ್ನು ವಿಶ್ವವಿದ್ಯಾಲಯದ ಹಂತದಲ್ಲಿ ಆಯೋಜಿಸುವ ಸಂಬಂಧ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವಾಗ, ಸ್ತೋತ್ರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸ್ಪರ್ಧೆಗಳನ್ನು ಏರ್ಪಡಿಸಬಹುದೆಂದು ಪ್ರಶಾಸನ ಸಮಿತಿಯ ಸದಸ್ಯರಾದ ಡಾ. ವನಿತಾ ರಾಮಸ್ವಾಮಿ, ಇವರು ಅಭಿಪ್ರಾಯಪಟ್ಟರು. ವಿಧಾನಪರಿಷತ್ತು ಹಾಗೂ ಪ್ರಶಾಸನ ಸಮಿತಿಯ ಸದಸ್ಯರಾದ ಡಾ.ಎಸ್. ಆರ್. ಲೀಲಾ, ಇವರು ನಾಟಕ ಸ್ಪರ್ಧೆಗಳನ್ನು ಏರ್ಪಡಿಸುವಾಗ 30–45 ನಿಮಿಷಗಳ ಅವಧಿಯನ್ನು ನಾಟಕಗಳಿಗೆ ನಿಗದಿಮಾಡಿ, ಸಮಕಾಲೀನ ಸಂಸ್ಕೃತ ನಾಟಕಗಳನ್ನು ಆಯ್ಕೆಮಾಡಿಕೊಳ್ಳಲು ಸ್ಪರ್ಧಿಗಳಿಗೆ ವಿಶ್ವವಿದ್ಯಾಲಯವು ಸೂಚಿಸಬೇಕೆಂದು ಅಭಿಪ್ರಾಯಪಟ್ಟರು. ಈ ಎಲ್ಲ ವಿಷಯಗಳಿಗೆ ಸಭೆಯ ಅನುಮೋದನೆ ನೀಡಿತು.**

**ವಿಷಯ 24: ವಿಶ್ವವಿದ್ಯಾಲಯದ ಎನ್. ಎಸ್. ಎಸ್. ಘಟಕವನ್ನು ಸ್ಥಾಪಿಸುವ ಬಗೆಗೆ**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 4 ವರ್ಷಗಳು ಕಳೆದಿದ್ದು, ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಎಲ್ಲ ಕಾಲೇಜುಗಳ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದ ದೃಷ್ಟಿಯಿಂದ ಹಾಗೂ ಸಮಾಜಸೇವೆ, ರಾಷ್ಟ್ರೀಯತೆ ಹಾಗೂ ಶಿಸ್ತಿನ ಗುಣಗಳನ್ನು ರೂಪಿಸಲು ರಾಷ್ಟ್ರೀಯ ಸೇವಾ ಯೋಜನೆಯು (ಎನ್.ಎಸ್.ಎಸ್) ಉತ್ತಮವಾಗಿದ್ದು, ವಿಶ್ವವಿದ್ಯಾಲಯದ ಮಟ್ಟದಲ್ಲಿ ಎನ್.ಎಸ್.ಎಸ್ ಘಟಕ ಸ್ಥಾಪಿಸಲು ಹಾಗೂ ಈ ಘಟಕದ ಸಂಯೋಜಕರನ್ನು ನೇಮಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. ಇದಕ್ಕೆ ತಗಲುವ ವೆಚ್ಚಕ್ಕಾಗಿ ವಿಶ್ವವಿದ್ಯಾಲಯದ ಹಣಕಾಸು ಸಮಿತಿಯಲ್ಲಿ ಅನುಮೋದನೆ ಪಡೆಯಲಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಈ ವಿಷಯಕ್ಕೆ ಸಂಬಂಧಿಸಿದಂತೆ ಒಪ್ಪಿಗೆ ನೀಡಲಾಯಿತು. ವಿಶ್ವವಿದ್ಯಾಲಯದ ಹಂತದಲ್ಲಿ ಎನ್.ಎಸ್.ಎಸ್. ಘಟಕವನ್ನು ತುರ್ತಾಗಿ ಸ್ಥಾಪಿಸಬೇಕಾದ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರದ ಎನ್.ಎಸ್.ಎಸ್. ಸೆಲ್‌ನಿಂದ ಅನುಮತಿ ಪಡೆಯಲು ಹಾಗೂ ಈ ಸಂಬಂಧ ಪ್ರಾಚಾರ್ಯರಿಗೆ ಪತ್ರ ಬರೆಯಲು ಸಭೆಯು ಸೂಚಿಸಿತು.**

**ವಿಷಯ 25: ವಿಶ್ವವಿದ್ಯಾಲಯದ ಷಾಣ್ಮಾಸಿಕ ಶೋಧಪತ್ರಿಕೆಗೆ ಸಂಬಂಧಿಸಿದಂತೆ ಲೇಖಕರಿಗೆ ಗೌರವ ಸಂಭಾವನೆಯ ಮಾನದಂಡವನ್ನು ನಿಗದಿಪಡಿಸುವ ಬಗೆಗೆ**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಷಾಣ್ಮಾಸಿಕ ಶೋಧಪತ್ರಿಕೆಯನ್ನು ಹೊರತರುತ್ತಿದೆ. ಈ ಶೋಧಪತ್ರಿಕೆಯಲ್ಲಿ ಅನೇಕ ವಿದ್ವತ್ಪೂರ್ಣ ಲೇಖನಗಳನ್ನು ಪ್ರಕಟಿಸುತ್ತಿದೆ. ಷಾಣ್ಮಾಸಿಕ ಶೋಧಪತ್ರಿಕೆಯಲ್ಲಿ ತಜ್ಞ ವಿದ್ವಾಂಸರಿಂದ ಲೇಖನಗಳನ್ನು ಆಹ್ವಾನಿಸಿ ಪ್ರಕಟಿಸಬಹುದಾಗಿರುತ್ತದೆ. ಈ ಸಂಬಂಧ ಆಹ್ವಾನಿತ ತಜ್ಞ ವಿದ್ವಾಂಸರಿಗೆ ನೀಡುವ ಗೌರವ ಸಂಭಾವನೆಯ ಮಾನದಂಡವನ್ನು ನಿಗದಿಪಡಿಸಬೇಕಿದೆ. ಆಹ್ವಾನಿತ ತಜ್ಞ ವಿದ್ವಾಂಸರಿಗೆ ಮಾತ್ರ ಈ ದರಪಟ್ಟಿಯು ಅನ್ವಯಿಸುವುದು. ಸಂಶೋಧನ ವಿದ್ಯಾರ್ಥಿಗಳಿಗೆ ಇದು ಅನ್ವಯಿಸುವುದಿಲ್ಲ. ದರಪಟ್ಟಿಯನ್ನು ಈ ಕೆಳಗಿನಂತೆ ನಿಗದಿಪಡಿಸಬಹುದಾಗಿದೆ ಎಂದು ಸಂಪಾದನ ಮಾರ್ಗದರ್ಶನ ಮಂಡಳಿಯು ಪ್ರಸ್ತಾವಿಸಿರುತ್ತದೆ.

| | |
|---|---|
| ಒಂದು ಲೇಖನಕ್ಕೆ (ಒಬ್ಬ ವಿದ್ವಾಂಸರಿಗೆ) | ರೂ. 2000/– |
| ಒಂದು ಲೇಖನದ ಪರಿಷ್ಕಾರಕ್ಕಾಗಿ (ಒಬ್ಬ ವಿದ್ವಾಂಸರಿಗೆ) | ರೂ. 500/– |
| ಗ್ರಂಥ ಪರಿಚಯ ಲೇಖನಕ್ಕಾಗಿ | ರೂ. 500/– |
| ಷಾಣ್ಮಾಸಿಕ ಪತ್ರಿಕೆಯ ಬಾಹ್ಯ ಸಂಪಾದಕರಿಗೆ ಗೌರವಧನ | ರೂ 5000/– |

ನಿರ್ಣಯ: **ವಿಶ್ವವಿದ್ಯಾಲಯದ ಷಾಣ್ಮಾಸಿಕ ಶೋಧಪತ್ರಿಕೆಗೆ ಸಂಬಂಧಿಸಿದಂತೆ ಈ ಮೇಲ್ಕಂಡ ದರಪಟ್ಟಿಗೆ ಸಭೆಯು ಅನುಮೋದನೆ ನೀಡಿತು. ಸಂಪಾದಕ ಮಂಡಳಿಯು ಶೋಧಪತ್ರಿಕೆಯ ಗರಿಷ್ಠ–ಕನಿಷ್ಠ ಪುಟಗಳನ್ನು ನಿಗದಿಪಡಿಸಲು ಸಭೆಯು ಸೂಚಿಸಿತು. ಈ ಗೌರವಧನವು ಕೇವಲ ಆಹ್ವಾನಿತ ಅಂಗೀಕೃತ ಲೇಖನಗಳಿಗೆ ಅನ್ವಯಿಸುತ್ತದೆ. ಸಂಶೋಧನ ವಿದ್ಯಾರ್ಥಿಗಳಿಗೆ ಈ ಗೌರವಧನವನ್ನು ನೀಡಲಾಗುವುದಿಲ್ಲ.**

**ವಿಷಯ 26: 2014–15ನೇ ಸಾಲಿನ ಎಂ.ಫಿಲ್–ವಿಶಿಷ್ಟಾಚಾರ್ಯ ಹಾಗೂ ಪಿಎಚ್.ಡಿ–ವಿದ್ಯಾವಾರಿಧಿಯ ಆರು ತಿಂಗಳ ಕೋರ್ಸ್‌ವರ್ಕಿನ ಖರ್ಚಿಗೆ ಅನುಮೋದನೆ ನೀಡುವ ಬಗೆಗೆ**

ಟಿಪ್ಪಣಿ: 2014–15ನೇ ಸಾಲಿನ ಎಂ.ಫಿಲ್–ವಿಶಿಷ್ಟಾಚಾರ್ಯ ಹಾಗೂ ಪಿಎಚ್.ಡಿ–ವಿದ್ಯಾವಾರಿಧಿ ಪದವಿಗಳ ಆರು ತಿಂಗಳ ಕೋರ್ಸ್‌ವರ್ಕ್ ತರಗತಿಗಳು ಆಗಸ್ಟ್–2014ರಿಂದ ಪ್ರಾರಂಭವಾಗುವುದು. 2013–14ನೇ ಸಾಲಿನ ಕೋರ್ಸ್‌ವರ್ಕ್‌ನ

ಅವಧಿಯಲ್ಲಿ ಬಾಹ್ಯತಜ್ಞರಿಗೆ ಅಂದಾಜು ರೂ. 30,000ಗಳನ್ನು ಪಾವತಿಸಲಾಗಿದೆ. ಈ ವರ್ಷದ ಕೋರ್ಸ್‌ವರ್ಕ್‌ನ ಅವಧಿಯಲ್ಲಿ ತಿಂಗಳಿಗೆ ನಾಲ್ವರಂತೆ ವಿಶೇಷೋಪನ್ಯಾಸವನ್ನು ಏರ್ಪಡಿಸುವುದರಿಂದ 24 ಬಾಹ್ಯತಜ್ಞರಿಗೆ ನೀಡುವ ಗೌರವಧನ ಹಾಗೂ ಇತರ ಭತ್ಯೆಗಳು ಅಂದಾಜು ರೂ. 40,000ಗಳು ಆಗಲಿವೆ. ಹಾಗೂ ಇನ್ನಿತರ ಸಾದಿಲ್ವಾರು ವೆಚ್ಚಕ್ಕಾಗಿ ರೂ. 10000ಗಳು ಅವಶ್ಯಕವಾಗಿದ್ದು, ರೂ. 50,000ಗಳ ವೆಚ್ಚಕ್ಕಾಗಿ ಅನುಮೋದನೆಯನ್ನು ಕೋರಿದೆ.

ನಿರ್ಣಯ: **2014–15ನೇ ಸಾಲಿನ ಎಂ.ಫಿಲ್–ವಿಶಿಷ್ಟಾಚಾರ್ಯ ಹಾಗೂ ಪಿಎಚ್.ಡಿ–ವಿದ್ಯಾವಾರಿಧಿಯ ಆರು ತಿಂಗಳ ಕೋರ್ಸ್‌ವರ್ಕ್ ತರಗತಿಗಳನ್ನು ನಡೆಸಲು ತಗಲುವ ವೆಚ್ಚಕ್ಕೆ ಸಭೆಯು ಅನುಮೋದನೆ ನೀಡಿತು.**

**ವಿಷಯ 27: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪ್ರಥಮಾ, ಕಾವ್ಯ, ಸಾಹಿತ್ಯ ತರಗತಿಗಳ ಪಠ್ಯಪುಸ್ತಕ ರಚನಾ ಸಮಿತಿಯ ಸದಸ್ಯರಿಗೆ ಗೌರವ ಸಂಭಾವನೆಯ ಮಾನದಂಡವನ್ನು ನಿಗದಿಪಡಿಸುವ ಬಗೆಗೆ**

ಟಿಪ್ಪಣಿ: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ನೂತನವಾಗಿ ರಚಿಸಲ್ಪಟ್ಟ ಪ್ರಥಮಾ–ಕಾವ್ಯ–ಸಾಹಿತ್ಯ ತರಗತಿಗಳ ಪಠ್ಯ ಪುಸ್ತಕ ರಚನಾ ಸಮಿತಿಯ ಸದಸ್ಯರಿಗೆ ನೀಡುವ ಗೌರವ ಸಂಭಾವನೆಯ ಮಾನದಂಡವನ್ನು ನಿಗದಿಪಡಿಸಲು ರಚಿಸಿದ ಉಪಸಮಿತಿಯ ಸಭೆಯು ದಿನಾಂಕ 03.06.2014ರಂದು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಿತು. ಈ ಸಮಿತಿಯು ಡಿ.ಎಸ್.ಇ.ಆರ್.ಟಿ ಮಾನದಂಡವನ್ನು ಆಧರಿಸಿ ಸಲ್ಲಿಸಿದ ದರಪಟ್ಟಿಯನ್ನು ಒಪ್ಪಬಹುದಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ತರಗತಿ | ಗೌರವ ಸಂಭಾವನೆ |
|---|---|
| ಪ್ರಥಮಾ ಮತ್ತು ಕಾವ್ಯ (ಪ್ರಾಥಮಿಕ ಹಾಗೂ ಪ್ರೌಢಶಾಲೆ) | ಅಧ್ಯಕ್ಷರು – 5000 (ಒಟ್ಟು) |
| | ಸದಸ್ಯರು – 3000 (ಒಟ್ಟು) |
| | ಸ್ವತಂತ್ರ ಲೇಖಕರು – 3000 (ಪ್ರತಿ ಪುಸ್ತಕಕ್ಕೆ) |
| | ಪರಿಶೀಲಕರು – 2000 (ಪ್ರತಿ ಪುಸ್ತಕಕ್ಕೆ) |
| | ಸಂಯೋಜಕರು – 2000 (ಪ್ರತಿ ಪುಸ್ತಕಕ್ಕೆ) |
| ಸಾಹಿತ್ಯ ತರಗತಿ (ಪದವಿ ಪೂರ್ವ ಶಿಕ್ಷಣ) | ಅಧ್ಯಕ್ಷರು – 6000 (ಒಟ್ಟು) |
| | ಸದಸ್ಯರು – 3000 (ಒಟ್ಟು) |
| | ಸ್ವತಂತ್ರ ಲೇಖಕರು – 4000 (ಪ್ರತಿ ಪುಸ್ತಕಕ್ಕೆ) |
| | ಪರಿಶೀಲಕರು – 4000 (ಪ್ರತಿ ಪುಸ್ತಕಕ್ಕೆ) |
| | ಸಂಯೋಜಕರು –4000 (ಒಟ್ಟು) |

ಈ ಕ್ರಮದಲ್ಲಿ ಒಟ್ಟು ವೆಚ್ಚ ರೂ. 1,54,000/–ಗಳ ಪಾವತಿಗಾಗಿ ಅನುಮತಿ ಕೋರಿದೆ.

ನಿರ್ಣಯ: **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪ್ರಥಮಾ, ಕಾವ್ಯ, ಸಾಹಿತ್ಯ ತರಗತಿಗಳ ಪಠ್ಯಪುಸ್ತಕ ರಚನಾ ಸಮಿತಿಯ ಸದಸ್ಯರಿಗೆ ಗೌರವ ಸಂಭಾವನೆಯ ಮಾನದಂಡವನ್ನು ನಿಗದಿಪಡಿಸಿರುವ ಬಗೆಗೆ ಹಾಗೂ ರೂ. 1,54,000/–ಗಳ ಮೊತ್ತದ ಪಾವತಿಗಾಗಿ ಸಭೆಯು ಅನುಮೋದನೆ ನೀಡಿತು.**

**ವಿಷಯ 28: ಶ್ರೀ ಕೆ.ಎಸ್. ಸುರೇಶ್, ಸಹಶಿಕ್ಷಕರು, ಶ್ರೀ ಉದ್ದಾನೇಶ್ವರ ವೇದ ಸಂಸ್ಕೃತ ಪಾಠಶಾಲೆ, ಸಿದ್ಧಗಂಗಾ ಮಠ, ತುಮಕೂರು - ಇವರಿಗೆ ಸಂತಾನಹರಣ ಶಸ್ತ್ರಚಿಕಿತ್ಸಾ ಉತ್ತೇಜನ ವಿಶೇಷ ವೇತನ ಬಡ್ತಿಗೆ ಅನುಮೋದನೆ ನೀಡುವ ಬಗ್ಗೆ.**

ಟಿಪ್ಪಣಿ: ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 27 ಎಸ್‌ಆರ್‌ಎಸ್ 85 ಬೆಂಗಳೂರು; ದಿನಾಂಕ 01.10.85 ಹಾಗೂ 31.10.86ರ ಪ್ರಕಾರ, ಮೇಲ್ಕಂಡ ಶಿಕ್ಷಕರ ಧರ್ಮಪತ್ನಿ ಶ್ರೀಮತಿ ದಾಕ್ಷಾಯಿಣಿ ಎಸ್.ಎಸ್., ಇವರು 03.10.2013ರಂದು ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಕೊಂಡಿರುವುದರಿಂದ, ಆಡಳಿತ ಮಂಡಳಿಯು ಈ ಶಿಕ್ಷಕರಿಗೆ 01.11.2013ರಿಂದ ಅನ್ವಯವಾಗುವಂತೆ, ವಿಶೇಷ ವೇತನ ಬಡ್ತಿಯನ್ನು ಮಂಜೂರು ಮಾಡಿ, ಪ್ರಸ್ತಾವನೆಯನ್ನು ಸಲ್ಲಿಸಿದೆ. ಮಾನ್ಯ ಕುಲಪತಿಗಳು ಈ ವಿಚಾರವನ್ನು ಪ್ರಶಾಸನ ಸಮಿತಿಯಲ್ಲಿ ಮಂಡಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಶ್ರೀ ಕೆ.ಎಸ್. ಸುರೇಶ್, ಸಹಶಿಕ್ಷಕರು, ಶ್ರೀ ಉದ್ದಾನೇಶ್ವರ ವೇದ ಸಂಸ್ಕೃತ ಪಾಠಶಾಲೆ, ಸಿದ್ಧಗಂಗಾ ಮಠ, ತುಮಕೂರು –ಇವರಿಗೆ ವಿಶೇಷ ವೇತನ ಬಡ್ತಿಗೆ ಅನುಮೋದನೆ ನೀಡುವ ಮುನ್ನ ಸದರಿ ವ್ಯಕ್ತಿಯ ವಯಸ್ಸು, ವಯಸ್ಸಿನ ಮಿತಿ, ಮುಂತಾದುದನ್ನು ಪರಿಶೀಲಿಸಿ ನಂತರ ಸರ್ಕಾರಿ ನಿಯಮಗಳನ್ವಯ ವೇತನ ಬಡ್ತಿಯನ್ನು ಜಾರಿಗೊಳಿಸಬಹುದೆಂದು ಸಭೆಯು ಅಭಿಪ್ರಾಯಪಟ್ಟಿತು.**

**ವಿಷಯ 29: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರ ವಾಹನಕ್ಕೆ ನಿಯಮಾನುಸಾರ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.**

ಟಿಪ್ಪಣಿ: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರ ವಾಹನಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರನ್ನು ನೇಮಕ ಮಾಡಿಕೊಳ್ಳಲು, ವಿವಿಧ ಸಂಸ್ಥೆಗಳಿಂದ ದರಪಟ್ಟಿಯನ್ನು ತರಿಸಲಾಗಿದ್ದು, ಮುಂದಿನ ಕ್ರಮ ಕೈಗೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರ ವಾಹನಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರನ್ನು ನೇಮಕ ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು.**

**ವಿಷಯ 30: ಭಾರತಿ ಸಂಸ್ಕೃತ ವಿದ್ಯಾಲಯ, ಕೆಸ್ತೂರು, ತುಮಕೂರು – ಈ ಪಾಠಶಾಲೆಗೆ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಅನುಮೋದಿಸುವ ಬಗ್ಗೆ**

ಟಿಪ್ಪಣಿ: ಭಾರತಿ ಸಂಸ್ಕೃತ ವಿದ್ಯಾಪೀಠ (ರಿ.), ಕೆಸ್ತೂರು – 572138, ತುಮಕೂರು – ಈ ಆಡಳಿತ ಮಂಡಳಿಯ ಅಡಿಯಲ್ಲಿ ನಡೆಯುತ್ತಿರುವ ಭಾರತಿ ಸಂಸ್ಕೃತ ವಿದ್ಯಾಲಯ, ಕೆಸ್ತೂರು, ತುಮಕೂರು – ಈ ಪಾಠಶಾಲೆಯಲ್ಲಿ ಮುಖ್ಯಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಎ.ಎಸ್.ಜಯಣ್ಣನವರು ದಿನಾಂಕ 19.02.2014ರಂದು ಕರ್ತವ್ಯ ನಿರ್ವಹಿಸುತ್ತಿರುವಾಗ ಅಕಾಲಿಕ ಮರಣ ಹೊಂದಿರುತ್ತಾರೆ. ಇವರ ಮರಣದಿಂದ ಖಾಲಿಯಾದ ಸಹಶಿಕ್ಷಕಕರ ಹುದ್ದೆಗೆ ಅನುಕಂಪದ ಆಧಾರದ ಮೇಲೆ, ಮೃತರ ಅವಿವಾಹಿತ ಮಗಳಾದ ಕು॥ ಎ.ಜೆ. ಕವನ, ಇವರನ್ನು ದಿನಾಂಕ 22.03.2014ರಂದು ನಡೆದ ಆಡಳಿತ ಮಂಡಳಿಯು ನೇಮಕಾತಿಯನ್ನು ಮಾಡಿಕೊಂಡು ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿರುವುದರಿಂದ ಸರ್ಕಾರದ ಆದೇಶದಂತೆ ನಿಯಮಾನುಸಾರ ಅನುಮೋದನೆ ಮಾಡಿ, ಘಟನೋತ್ತರ ಅನುಮೋದನೆಗಾಗಿ ಮಾನ್ಯ ಕುಲಪತಿಗಳ ಆದೇಶದಂತೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಭಾರತಿ ಸಂಸ್ಕೃತ ವಿದ್ಯಾಲಯ, ಕೆಸ್ತೂರು, ತುಮಕೂರು – ಈ ಪಾಠಶಾಲೆಗೆ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಅನುಮೋದಿಸುವ ಮುನ್ನ ಸಂಪೂರ್ಣ ವಿವರಗಳನ್ನು ಆಡಳಿತ ಮಂಡಳಿಯಿಂದ ಪಡೆದು ಟಿಪ್ಪಣಿಗಳನ್ನು ವಿಸ್ತಾರವಾಗಿ ಪರಶೀಲಿಸಿದ ನಂತರ ಅನುಮೋದಿಸಬಹುದೆಂದು ಸಭೆಯು ತಿಳಿಸಿತು.**

**ವಿಷಯ 31: ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಿಕೊಂಡು ನೇಮಕಾತಿ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುವ ಬಗೆಗೆ.**

ಟಿಪ್ಪಣಿ: ಈ ಕೆಳಕಂಡ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅನುಮತಿ ಆದೇಶದ ಮೇರೆಗೆ ಪತ್ರಿಕಾ ಪ್ರಕಟಣೆಯನ್ನು ನೀಡಿ ಅರ್ಜಿಗಳನ್ನು ಆಹ್ವಾನಿಸಿ ಇಲಾಖೆಯಿಂದ ಅನುಮತಿ ಪಡೆದು ಇಲಾಖಾ ಪ್ರತಿನಿಧಿಯೊಂದಿಗೆ ಸಂದರ್ಶನ ನಡೆಸಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಆಡಳಿತಮಂಡಳಿಯು ನೇಮಕಾತಿ ಮಾಡಿಕೊಂಡು, ನೇಮಕಾತಿ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಹತ್ತು ಪಾಠಶಾಲೆಗಳ ಹತ್ತು ಶಿಕ್ಷಕರ ಹುದ್ದೆಗಳನ್ನು ನೇಮಕಾತಿ ಅನುಮೋದನೆ ಮಾಡಬೇಕಾದರೆ ವಾರ್ಷಿಕ ಅಂದಾಜು 20 ಲಕ್ಷ ರೂಗಳು ಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳ ಆದೇಶವನ್ನು ಪಡೆದು ಅನುಮೋದನೆಗಾಗಿ ಪ್ರಶಾಸನ ಸಮಿತಿಯ ಮುಂದೆ ಮಂಡಿಸಿದೆ.

1. ಶ್ರೀ ಸಿದ್ದಲಿಂಗೇಶ್ವರ ಸಂಸ್ಕೃತ ಪಾಠಶಾಲೆ, ಬೆಳಗಾವಿ.
2. ನಾಗಲಿಂಗಸ್ವಾಮಿ ಸಂಸ್ಕೃತ ಪಾಠಶಾಲೆ, ಆಲಂಗಾರು, ಮೂಡಬಿದರೆ.
3. ಸುಬ್ರಹ್ಮಣ್ಯೇಶ್ವರ ಸಂಸ್ಕೃತ ಪಾಠಶಾಲೆ, ಕಳಸ.
4. ಮಹಾಲಿಂಗೇಶ್ವರ ಸಂಸ್ಕೃತ ಪಾಠಶಾಲೆ, ಬಹುಳಾಪುರ, ಉಡುಪಿ ಜಿಲ್ಲೆ.
5. ಜಗದ್ಗುರು ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆ, ಲಕ್ಷ್ಮೇಶ್ವರ.
6. ಶ್ರೀ ತೋಂಟದಾರ್ಯ ಸಂಸ್ಕೃತ ಪಾಠಶಾಲೆ. ಮೈಸೂರು.
7. ಶ್ರೀಕಾಂತ ಸಂಸ್ಕೃತ ಪಾಠಶಾಲೆ, ಮೈಸೂರು.
8. ವಾಣಿವಿನಾಯಕ ಸಂಸ್ಕೃತ ಪಾಠಶಾಲೆ, ಹೆಗ್ಗರಣೆ, ಉ.ಕ.ಜಿಲ್ಲೆ.
9. ಸಿದ್ಧಾರ್ಥ ಸಂಸ್ಕೃತ ಪಾಠಶಾಲೆ, ಮಳವಳ್ಳಿ.
10. ಪ್ರೋಗ್ರೆಸ್ಸೀವ್ ಸಂಸ್ಕೃತ ಪಾಠಶಾಲೆ. ಶಿರಸಿ.

ನಿರ್ಣಯ: **ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ಆಡಳಿತ ಮಂಡಳಿಗಳು ಸಲ್ಲಿಸಿದ ಪ್ರಸ್ತಾವನೆಗಳಿಗೆ ಸಂಬಂಧಿಸಿ ಸ್ಥಳೀಯ ಮತ್ತು ರಾಜ್ಯಮಟ್ಟದ ಪತ್ರಿಕೆಗಳಲ್ಲಿ ನೀಡಿರುವ ಜಾಹೀರಾತು, ಪಾಠಶಾಲೆಗಳ ಆಡಳಿತ**

ಮಂಡಳಿಯ ಸಭೆಯ ನಡಾವಳಿ, ಮೀಸಲಾತಿಯ ವಿವರ – ಈ ಎಲ್ಲದರ ವಿಸ್ತೃತ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲ ಸೂಚಿಸಲಾಯಿತು. ಒಬ್ಬನೇ ಅಭ್ಯರ್ಥಿಯು ಇದ್ದ ಪಕ್ಷದಲ್ಲಿ ಮತ್ತೊಮ್ಮೆ ಪ್ರಕಟಣೆ ನೀಡಲು ಸಭೆಯು ಸೂಚಿಸಿತು.

**ವಿಷಯ 32: ವಿದ್ವನ್ನರಹರಿ ಶಾಸ್ತ್ರಿಗಳವರ ಸಂಸ್ಕೃತ ಪಾಠಶಾಲೆ, ಮುತ್ತೂರು, ಚಿಕ್ಕಬಳ್ಳಾಪುರ ಜಿಲ್ಲೆ. ಇಲ್ಲಿ ಖಾಲಿ ಇರುವ ಎರಡು ಸಹಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗೆಗೆ.**

ಟಿಪ್ಪಣಿ: ಮೇಲ್ಕಂಡ ಸಂಸ್ಕೃತ ಪಾಠಶಾಲೆಯಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಎ.ಟಿ. ವೇಣುಗೋಪಾಲ ಕೃಷ್ಣಮಾಚಾರ್‌ರವರು ದಿನಾಂಕ: 30.09.2011, ಹಾಗೂ ಶ್ರೀ ಎಂ.ಎಸ್. ವೆಂಕಟೇಶಮೂರ್ತಿಯವರು ದಿನಾಂಕ: 31.08.2013ರಂದು ವಯೋನಿವೃತ್ತಿ ಹೊಂದಿರುತ್ತಾರೆ, ಪಾಠಶಾಲೆಯಲ್ಲಿ ಅಭ್ಯಾಸಮಾಡುತ್ತಿರುವ ಸಂಸ್ಕೃತ ವಿದ್ಯಾರ್ಥಿಗಳಿಗೆ ಹಿತದೃಷ್ಟಿಯಿಂದ ವಯೋನಿವೃತ್ತಿಯಿಂದ ತೆರವಾದ ಎರಡು ಹುದ್ದೆಗಳನ್ನು ತುಂಬಿಕೊಳ್ಳಲು ಆಡಳಿತಮಂಡಳಿಯು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಈ ಎರಡು ಹುದ್ದೆಗಳಲ್ಲಿ 2014–15ನೇ ಸಾಲಿನ ಆಯವ್ಯಯದಲ್ಲಿ ಒಂದು ಹುದ್ದೆಗೆ ಮಾತ್ರ ಅವಕಾಶ ಮಾಡಿ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ. ಮಾನ್ಯ ಕುಲಪತಿಗಳು ಇದಕ್ಕೆ ಸಂಬಂಧಿಸಿದಂತೆ ಪ್ರಶಾಸನ ಸಮಿತಿ ಮುಂದೆ ಮಂಡಿಸಿ ಪೂರ್ವಾನುಮತಿ ಪಡೆಯುವುದೆಂದು ಆದೇಶಿಸಿರುವುದರಿಂದ ಈ ಸಂಬಂಧ ಒಂದು ಹುದ್ದೆಗೆ ಅವಕಾಶ ಮಾಡಿಕೊಡಲು ಪ್ರಶಾಸನ ಸಮಿತಿಯ ಅನುಮತಿ ಕೋರಿ ವಿಷಯವನ್ನು ಮಂಡಿಸಿದೆ.

ನಿರ್ಣಯ: **ವಿದ್ವನ್ನರಹರಿ ಶಾಸ್ತ್ರಿಗಳವರ ಸಂಸ್ಕೃತ ಪಾಠಶಾಲೆ, ಮುತ್ತೂರು, ಚಿಕ್ಕಬಳ್ಳಾಪುರ ಜಿಲ್ಲೆ. ಇಲ್ಲಿ ಖಾಲಿ ಇರುವ ಎರಡು ಸಹಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡುವ ಮುನ್ನ ಅದಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಪ್ರತಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು. ಹಾಗೂ ಇಂತಹ ಎಲ್ಲ ಪ್ರಕರಣಗಳನ್ನು ಒಟ್ಟಿಗೆ ಮಂಡಿಸಲು ಸೂಚಿಸಲಾಯಿತು.**

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರ ವಿಷಯಗಳು**

**ವಿಷಯ 01: ಸರ್ಕಾರದಿಂದ ಮಂಜೂರಾದ ವಿಶ್ವವಿದ್ಯಾಲಯದ ಜಮೀನಿನ ಅಧಿಗ್ರಹಣದ ಬಗೆಗೆ**

ಟಿಪ್ಪಣಿ: ಸರ್ಕಾರದಿಂದ ಈಗಾಗಲೇ ಮಂಜೂರಾದ 100 ಎಕರೆ ಭೂಮಿಯ ಅಧಿಗ್ರಹಣಕ್ಕೆ ಸಂಬಂಧಿಸಿದಂತೆ ಪ್ರಶಿಕ್ಷಣ ಪರಿಷತ್ತಿನ ಮಾನ್ಯ ಸದಸ್ಯರಾದ ಪ್ರೊ. ಕೆ. ಈ. ರಾಧಾಕೃಷ್ಣ ಇವರು ಪ್ರಸ್ತಾವಿಸಿದರು. ಹಾಗೂ ಈ ಬಗೆಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ನಿರ್ಣಯ: **ಮಾನ್ಯ ಕುಲಸಚಿವರು ಈ ಸಂಬಂಧ ಸದ್ಯದ ಸ್ಥಿತಿಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿಯೂ ಹಾಗೂ ಈ ಬಗೆಗೆ ಮುಂದಿನ ಸಭೆಯಲ್ಲಿ ವಿವರ ನೀಡುವುದಾಗಿಯೂ ತಿಳಿಸಿದರು.**

Sridhar M.K.
**ಪ್ರೊ. ಎಂ.ಕೆ. ಶ್ರೀಧರ್**
ಸದಸ್ಯ ಕಾರ್ಯದರ್ಶಿ

Srivara
**ಪ್ರೊ. ಶ್ರೀನಿವಾಸ ವರಖೇಡಿ**
ಅಧ್ಯಕ್ಷರು